**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 17 / 2016**

ಚಾಸಾ :- 12 ಪ್ರಾಸಾ :- 10

| | |
|---|---|
| ಹೆಸರು | **ಹೆಚ್.ಸಿ. ಜಗದೀಶ್** |
| ತಂದೆ ಹೆಸರು | **ಚನ್ನಪ್ಪ** |
| ವಯಸ್ಸು | **69** |
| ಉದ್ಯೋಗ | **ನಿವೃತ್ತ ಪಿ.ಐ.** |
| ವಿಳಾಸ | **ಬೆಂಗಳೂರು** |

**ದಿನಾಂಕ: 21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ನಾನು ದಿ: 12-05-2015 ರಿಂದ 2016 ರವರೆಗೆ ರಾಮನಗರ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 12-05-2015 ರಂದು ಗುನ್ನೆ ನಂಬರ್-126/2013 ರ ಕಡತವನ್ನು ಸುಬ್ರಮಣ್ಯ ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ದಿ: 20-08-2015 ರಂದು ಅಂಕುಶ್ ಬಿನ್ ಕೆಂಚೇಗೌಡ ಕಡೂರು ಇವರಿಗೆ ಪೋಲಿಸ್ ನೋಟಿಸನ್ನು ಜಾರಿ ಮಾಡಲು ಕಳುಹಿಸಿರುತ್ತೇನೆ. ತಹಶೀಲ್ದಾರ್ ಆಲೂರು ಹಾಗೂ ತಹಶೀಲ್ದಾರ್ ಹೊಸದುರ್ಗ ಮತ್ತು ತಹಶೀಲ್ದಾರ್ ರಾಮದುರ್ಗ, ತಹಶೀಲ್ದಾರ್ ಬಸವನಬಾಗೇವಾಡಿ ಇವರುಗಳಿಗೆ ಲಾಗಿನ್ ಮಾಡಿದ ವಿವರವನ್ನು ತಿಳಿಸುವಂತೆ ಕೋರಿರುತ್ತೇನೆ. ದಿ: 25-09-2015 ರಂದು ತಹಶೀಲ್ದಾರ್ ರಾಯಚೂರು, ಪ್ರಿನ್ಸಿಫಲ್ ಆರ್ಟ್ಸ್ ಕಾಲೇಜ್ ಸಿಂಧನೂರು, ವಿಶೇಷ ತಹಶೀಲ್ದಾರ್ ಕರಟಗಿ ಹಾಗೂ ಪ್ರಿನ್ಸಿಫಲ್ ತರಬೇತಿ ಕೇಂದ್ರ ಚಿತ್ರದುರ್ಗ ಹಾಗೂ ತಹಶೀಲ್ದಾರ್ ಚಿಂತಾಮಣಿ ಇವರುಗಳಿಗೆ ಲಾಗಿನ್ ಮಾಡಿದ ವಿವರವನ್ನು ತಿಳಿಸುವಂತೆ ಪುನಃ ಅರ್ಜಿಯನ್ನು ನೀಡಿರುತ್ತೇನೆ. ದಿನಾಂಕ: 26-12-2015 ರಂದು ಉಳಿಕೆ ಆರೋಪಿಗಳ ಮಾಹಿತಿ ಲಭ್ಯ ಇಲ್ಲದ ಕಾರಣ ಮಾಹಿತಿ ಸಂಗ್ರಹಿಸಿ ದಸ್ತಗಿರಿ ಮಾಡಿ ಹೆಚ್ಚುವರಿ ದೋಷರೋಪಣೆ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು 1 ರಿಂದ 3ನೇ ಆರೋಪಿಗಳ ವಿರುದ್ಧ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು** :- ಶ್ರೀ. **ಎಲ್.ಪಿ.ಎಸ್.** ವಕೀಲರಿಂದ **2ನೇ ಆರೋಪಿ** ಪರವಾಗಿ :-

ನೀವು ವರದಿ ಕೇಳಿ ನೀಡಿದ ಪತ್ರಕ್ಕೆ ಮಾಹಿತಿಯನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ಆರೋಪಿಗಳ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಹಿಂದಿನ ತನಿಖಾಧಿಕಾರಿ ಪಡೆದ ಹೇಳಿಕೆಗಳ ಆಧಾರದ ಮೇಲೆ ಹಾಗೂ ಲಾಗಿನ್ ಆಧಾರದ ಮೇಲೆ ಎಂದು ನುಡಿಯುತ್ತಾರೆ. ಸದರಿ ಲಾಗಿನ್ ಗಳು ಆರೋಪಿಗಳಿಗೆ ಸಂಬಂಧಿಸಿದ್ದಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಗಳ ವಿರುದ್ದ ಯಾವುದೇ ಸಾಕ್ಷ್ಯದಾರ ಇಲ್ಲದೇ ಇದ್ದರೂ ಕೂಡ ಚಾಸಾ-1 ರವರು ತಹಶೀಲ್ದಾರ್ ಆದ್ದರಿಂದ ಅವರ ಹೇಳಿಕೆಯ ಮೇರೆಗೆ ಆರೋಪಿಗಳ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** :- 1 ಮತ್ತು 3ನೇ ಆರೋಪಿ ಪರ ವಕೀಲರು 2ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡಿರುತ್ತಾರೆ.

ಮರು ವಿಚಾರಣೆ :- ಇರುವುದಿಲ್ಲ.

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.